**ಪಿ.ಡಬ್ಲ್ಯೂಃ9**

**ಸಾಕ್ಷಿಯನ್ನು ದಿನಾಂಕ 12.08.2025 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಎಲ್ ಎಸ್ ಕೆ ವಕೀಲರಿಂದ ಬಿ.ಎ.ಡಿ ವಕೀಲರ ಪರವಾಗಿ**

**ಆರೋಪಿಯ ಪರಃ**

**24.** ನಾನು ಶಾರದಾ ಟವರ್ಸ್‌ಗೆ ಹೋಗುವಾಗ ವಾರಂಟ್ ಮಾತ್ರ ತೆಗೆದುಕೊಂಡು ಹೋಗಿದ್ದೇನೆ. ಎಸ್.ಪಿ ರವರಿಗೆ ಕೋರಿಕೆ ಪತ್ರ ತೆಗೆದುಕೊಂಡು ಹೋಗಿಲ್ಲ. ನಮ್ಮೊಂದಿಗೆ ಕ್ಯಾಮರಾಮನ್ ಇದ್ದರು. ಮೌಲ್ಯ ನಿರ್ಧರಿಸುವ ಪರಿಣಿತರನ್ನು ಕರೆದುಕೊಂಡು ಹೋಗಿಲ್ಲ. ನಾವು ಫೋಟೋ ತೆಗೆದಿದ್ದೇವೆ. ವೀಡಿಯೋ ಮಾಡಿದ ಬಗ್ಗೆ ನೆನಪಿಲ್ಲ. ಪಂಚನಾಮೆಯೊಂದಿಗೆ ನಾವು ತೆಗೆದ ಫೋಟೋ ಗಳನ್ನು ನಮ್ಮ ಮೇಲಾಧಿಕಾರಿಗಳ ಮುಂದೆ ಹಾಜರುಪಡಿಸಿಲ್ಲ. ಗಿದ್ದಲೂರು ಪೋಲೀಸ್ ಠಾಣೆಯವರಿಗೆ ಮಾಹಿತಿ ನೀಡಿದ್ದೆವು ಆದರೆ ಅವರು ಪಂಚನಾಮೆ ಕಾಲಕ್ಕೆ ಹಾಜರು ಇರಲಿಲ್ಲ. ಗಿದ್ದಲೂರು ಪೊಲೀಸರಿಗೆ ಮೌಖಿಕವಾಗಿ ಮಾಹಿತಿ ನೀಡಿದ್ದೆವು. ಬೇರೆ ರಾಜ್ಯದಲ್ಲಿ ಯಾವುದಾದರು ಮೊಕದ್ದಮೆ ಗಳಲ್ಲಿ ತನಿಖೆ ಮಾಡುವ ಸಮಯದಲ್ಲಿ ಸದರಿ ಜಿಲ್ಲೆಯ ಎಸ್.ಪಿ ರವರಿಗೆ ಕೋರಿಕೆ ಪತ್ರ ಸಲ್ಲಿಸಿ ಅವರಿಂದ ಅನುಮತಿ ಪಡೆದುಕೊಂಡು ನಂತರ ತನಿಖೆ ಕೈಗೊಳ್ಳಬೇಕು ಎನ್ನುವುದು ಸರಿ . ಸಾಕ್ಷಿಯು ಸ್ವತಃ ನುಡಿಯುತ್ತಾರೆ ನಾವು ಆ ನಿಯಮವನ್ನು ಪಾಲಿಸಿಲ್ಲ.

**P.W.9**
**Date : 12.08.2025**

25. ಶಾರದ ಟವರ್ಸ್ ಗೆ ಹೋದ ನಂತರ ಸದರಿ ಆಸ್ತಿಯು ಆರೋಪಿ ಹೆಂಡತಿಗೆ ಸಂಬಂಧಿಸಿದ್ದು ಎಂದು ನಮಗೆ ತಿಳಿದು ಬಂತು. ಸದರಿ ಶಾರದ ಟವರ್ಸ ಆರೋಪಿ ಪತ್ನಿಗೆ ಹೇಗೆ ಬಂತು ಎಂದು ನಮಗೆ ತಿಳಿದಿಲ್ಲ. ಶಾರದ ಟವರ್ಸ ನಲ್ಲಿದ್ದ ಸಪ್ತಗಿರಿ ಲಾಡ್ಜ್ ಆರೋಪಿಯ ಹೆಂಡತಿಯ ಮಾಲೀಕತ್ವದಲ್ಲಿ ಇತ್ತು ಎನ್ನುವುದು ನಮ್ಮ ಗಮನಕ್ಕೆ ಬಂದಿಲ್ಲ. ಸಪ್ತಗಿರಿ ಲಾಡ್ಜ ನಲ್ಲಿ ತಪಾಸಣೆ ಮಾಡಿದಾಗ ಕೆಲ ವಸ್ತುಗಳ ಮೌಲ್ಯಗಳ ಬಗ್ಗೆ ರಸೀದಿಗಳು ಸಿಕ್ಕಿವೆ , ಕೆಲವು ವಸ್ತುಗಳ ಮೌಲ್ಯಗಳ ರಸೀದಿಗಳು ಸಿಕ್ಕಿಲ್ಲ. ಸಪ್ತಗಿರಿ ಲಾಡ್ಜ ನಲ್ಲಿ ಟಿವಿ , ಕಾಟ್ , ಬೆಡ್ ಮತ್ತು ಇತರೆ ವಸ್ತುಗಳನ್ನು ಯಾವಾಗ ಖರೀದಿ ಮಾಡಿದ್ದರು ಎನ್ನುವ ಬಗ್ಗೆ ನನಗೆ ಮಾಹಿತಿ ಇಲ್ಲ. ಸಪ್ತಗಿರಿ ಲಾಡ್ಜ ಯಾವಾಗ ಪ್ರಾರಂಭ ಆಯಿತು ಎನ್ನುವ ಬಗ್ಗೆ ನನಗೆ ಮಾಹಿತಿ ಇಲ್ಲ.

26. ಶಾರದ ಟವರ್ಸ ನಲ್ಲಿ ಇನ್ನು ಹಲವು ಮಳಿಗೆಗಳನ್ನು ಬಾಡಿಗೆಗೆ ಕೊಡಲಾಗಿತ್ತು. ಸದರಿ ಬಾಡಿಗೆದಾರರ ವಿಳಾಸವನ್ನು ನಾನು ಪಡೆದುಕೊಂಡಿದ್ದೇನೆ. ನಾನು ಅವರನ್ನು ತನಿಖೆ ಮಾಡಿಲ್ಲ. ಸದರಿ ಮಳಿಗೆಗಳಿಗೆ ಎಷ್ಟು ಬಾಡಿಗೆ ಕೊಡುತ್ತಿದ್ದರು ಎನ್ನುವ ಬಗ್ಗೆ ಪಂಚನಾಮೆಯಲ್ಲಿ ನಮೂದಿಸಿದ್ದೇನೆ. ಪಂಚನಾಮೆ ಬರೆದ ನಂತರ ಪಂಚರ ಸಹಿಯನ್ನು ಪಡೆಯುತ್ತೇವೆ. ಪಂಚನಾಮೆಯ ಎಲ್ಲಾ ಪುಟಗಳಿಗೆ ಸಹಿ ಪಡೆಯುತ್ತೇವೆ. ಒಂದು ಪುಟಕ್ಕೆ ಒಂದು ಸಹಿ ಮಾತ್ರ ಪಡೆಯುತ್ತೇವೆ. ಶಾರದ ಟವರ್ಸದಲ್ಲಿ ನಾವು ನಿಪಿ.22 ಪಂಚನಾಮೆಯನ್ನು ಬರೆದಿಲ್ಲ ಎನ್ನುವುದು ಸರಿಯಲ್ಲ. ಖಾಲಿ ಹಾಳೆಯಲ್ಲಿ ಸಾಕ್ಷಿದಾರರ ಸಹಿ ಪಡೆದುಕೊಂಡಿದ್ದೇವೆ ಎನ್ನುವುದು ಸರಿಯಲ್ಲ. ನಿಪಿ.22 ರಲ್ಲಿ ಪುಟ 11 ರಲ್ಲಿ ಮೇಲೆ ಮತ್ತು ಪುಟದ ಕೆಳಗೆ ಪಂಚರ ಸಹಿ ಮತ್ತು ನನ್ನ ಸಹಿ ಕಂಡು ಬರುತ್ತದೆ. ಶಾರದ ಟವರ್ಸ ನಲ್ಲಿ ನಾವು ಯಾವುದೇ ಪಂಚನಾಮೆ ಮಾಡದೆ ಖಾಲಿ ಹಾಳೆಯಲ್ಲಿ ಸಹಿ ಪಡೆದುಕೊಂಡಿರುತ್ತೇವೆ ಮತ್ತು ಸಾಕ್ಷಿದಾರರ ಹೇಳಿಕೆ ಪಡೆದುಕೊಳ್ಳುವ ಸಮಯದಲ್ಲಿ ಅವರ ಸಹಿಯನ್ನು ಪಡೆದುಕೊಂಡಿರುತ್ತೇವೆ ಎನ್ನುವುದು ಸರಿಯಲ್ಲ. ನಿಪಿ.22

**P.W.9**
**Date : 12.08.2025**

ಪಂಚನಾಮೆಯನ್ನು ಸೃಷ್ಟಿಸಿ ಹಾಜರುಪಡಿಸಿದ್ದೇವೆ ಎನ್ನುವುದು ಸರಿಯಲ್ಲ. ಸಪ್ತಗಿರಿ ಡಿಲಕ್ಸ ಲಾಡ್ಜ ನ ಮ್ಯಾನೇಜರ್ ಸಂಕ್ರಾಂತಿ ಸಾಂಭಮೂರ್ತಿ ರವರಿಗೆ ಕನ್ನಡ ಗೊತ್ತಿದೆ ಎನ್ನುವ ಬಗ್ಗೆ ನಾನು ತಿಳಿದುಕೊಂಡಿದ್ದೇನೆ.

**ಮರು-ವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರಿಂದ**

**ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)**

**ಓ.ಹೇ.ಕೆ. ಸರಿ ಇದೆ.**

\

**ಪ್ರಧಾನ ಜಿಲ್ಲಾ, ಸತ್ರ ಮತ್ತು ವಿಶೇಷ ನ್ಯಾಯಾಧೀಶರು,**
**ಬಳ್ಳಾರಿ.**